

‘ಕಬ್ಬಿಣ ಕೈಕಡಗ,
ಕುಣಿಗೋಲು, ಕೂದಲು
ಕಂಬಳಿ ಹೊದ್ದಾಂವ
ಬಂದಾನ...’

‘ಕರಡಿಯ ಕುಣಿತ’ ಕವನದಲ್ಲಿ ವರಕವಿ ಬೇಂದ್ರೆ ಮೊದಲಿಗೆ ಚಿತ್ರಿಸಿದ್ದು ಕೈಕಡಗವನ್ನು. ಇವತ್ತು ಕಡಗವನ್ನು ‘ಬ್ರೇಸ್‌ಲೆಟ್’ ಎಂದು ಸಾಮಾನ್ಯೀಕರಿಸಿ ಹೇಳುತ್ತಿದ್ದೇವೆ. ಒಂದು ಕಾಲದಲ್ಲಿ ಲೋಹದ್ದಷ್ಟೆ ಆಗಿದ್ದ ಕಡಗ, ಈಗ ಹೊಸ ಹೊಸ ರೂಪಗಳಲ್ಲಿ ಕೈಗಳನ್ನು ಅಲಂಕರಿಸಿವೆ.

ದೀಪಿಕಾ ಪಡುಕೋಣೆ ತರಹದ ನಟಿ ವಿನ್ಯಾಸಕರು ಸೂಚಿಸಿದ ಸಮಕಾಲೀನ ಬ್ರೇಸ್‌ಲೆಟ್ ತೊಟ್ಟು ಸಮಾರಂಭಕ್ಕೆ ಸಿದ್ಧವಾದರೆ, ಅವರ ಪತಿ ರಣವೀರ್ ಕೈಯನ್ನು ಯಾವುದೋ ದಾರದ ಬ್ರೇಸ್‌ಲೆಟ್ ಅಲಂಕರಿಸುತ್ತದೆ. ಕಡಗವನ್ನು ‘ಸ್ಟೈಲ್ ಸ್ಟೇಟ್‌ಮೆಂಟ್’ ಆಗಿ ಬಳಸಿದವರ ಯಾದಿಯೂ ನಮ್ಮಲ್ಲಿ ಇದೆ. ನಟ ವಿಷ್ಣುವರ್ಧನ್ ಈ ವಿಷಯದಲ್ಲಿ ಮುಂಚೂಣಿಯಲ್ಲಿದ್ದರು. ಖಳರನ್ನು ಬಗ್ಗುಬಡಿಯುವ ಮುನ್ನ ತಮ್ಮ ಕಡಗವನ್ನು ಅವರು ಅಲ್ಲಾಡದಂತೆ ಭದ್ರ ಮಾಡುವ ಪರಿಯೇ ಒಂದು ‘ಬಿಲ್ಡಪ್ ಸ್ಟೇಟ್‌ಮೆಂಟ್’ ಆಗಿತ್ತು. ‘ಮಿಸ್ಟರ್ ಅಂಡ್ ಮಿಸಸ್ ರಾಮಾಚಾರಿ’ ಚಿತ್ರದಲ್ಲಿ ನಟ ಯಶ್ ಕೂಡ ಅದೇ ವರಸೆಯನ್ನು ಉಜ್ಜಿದ್ದರು.

‘ಕಾಫಿ ವಿತ್ ಕರಣ್’ ಕಾರ್ಯಕ್ರಮದಲ್ಲಿ ಕತ್ರೀನಾ ಕೈಫ್ ತೊಟ್ಟಿದ್ದ ಬ್ರೇಸ್‌ಲೆಟ್‌ನ ಬೆಲೆ 2000 ಡಾಲರ್ (ಸುಮಾರು ಒಂದೂವರೆ ಲಕ್ಷ ರೂಪಾಯಿ) ಎಂದು ಆಮೇಲೆ ಚರ್ಚೆಯಾಗಿತ್ತು.

ಕೆಂಪು ಹಾಗೂ ಹಳದಿ ಬಣ್ಣದ ಸಣ್ಣ ದಾರದಿಂದ ಮಾಡಿದಂಥ ಬ್ರೇಸ್‌ಲೆಟ್ ಅನ್ನು ನಟಿ ಶ್ರೀದೇವಿ ಪುತ್ರಿ ಜಾನ್ಹವಿ ಕಪೂರ್ ತೊಡುವುದು ರೂಢಿ. ‘ಪ್ಲೋ ಲೂಯಿ ವ್ಯೂಟನ್ ಲವ್ ಬ್ರೇಸ್‌ಲೆಟ್ಸ್’ ಎಂದೇ ಜನಪ್ರಿಯವಾದ ಇವುಗಳ ಬೆಲೆ 35 ಸಾವಿರ ರೂಪಾಯಿ.

ಅನುಷ್ಕಾ ಶರ್ಮಾ ಒಮ್ಮೆ ಸಮಾರಂಭವೊಂದರಲ್ಲಿ ಚಪ್ಪಾಳೆ ಹೊಡೆಯುತ್ತಾ ನಿಂತಾಗ ಎಲ್ಲರ ಕಣ್ಣು ಅವರ ಚಿನ್ನದ ಬ್ರೇಸ್‌ಲೆಟ್ ಮೇಲೆ ಬಿದ್ದಿತ್ತು. ಬಂಗಾರದ ಬಣ್ಣದ ಡಯಲ್‌ನ ಕೈಗಡಿಯಾರದೊಟ್ಟಿಗೆ ಅವರು ತೊಟ್ಟಿದ್ದ ‘ಜಸ್ಟ್ ಅನ್ ಕ್ಲೋ’ ಬ್ರೇಸ್‌ಲೆಟ್‌ನ ಬೆಲೆ ಸುಮಾರು ನಾಲ್ಕೂಮುಕ್ಕಾಲು ಲಕ್ಷ ರೂಪಾಯಿ.

ದೀಪಿಕಾ ಪಡುಕೋಣೆ ತಮಗೆ ಸ್ಕ್ರೂ ಬ್ರೇಸ್‌ಲೆಟ್ ಇಷ್ಟ ಎಂದು ಒಮ್ಮೆ ಫ್ಯಾಷನ್ ಸಂಬಂಧಿ ಸಂದರ್ಶನದಲ್ಲಿ ಹೇಳಿಕೊಂಡಿದ್ದರು. ಕಾರ್ಟಿಯರ್ ಕಂಪನಿಯ ‘ದಿ ಲವ್ ಬ್ರೇಸ್‌ಲೆಟ್’ ಅನ್ನು ಅವರು ಧರಿಸಿದ್ದು ಹೆಚ್ಚು ಗಮನ ಸೆಳೆದಿತ್ತು. ಅದರ ಬೆಲೆ ಕೂಡ ಸುಮಾರು ನಾಲ್ಕೂಕಾಲು ಲಕ್ಷ ರೂಪಾಯಿ.

‘ಊ ಅಂಟಾವಾ’ ಹಾಡಿನಿಂದ ಮೊನ್ನೆ ಮೊನ್ನೆ ಮತ್ತೆ ಜನಪ್ರಿಯರಾಗಿರುವ ಸಮಂತಾ ಋತ್‌ಪ್ರಭು ಬ್ರೇಸ್‌ಲೆಟ್ ವಿಷಯದಲ್ಲಿ ಸರಳರು. ‘ಇವಿಲ್ಸ್ ಐ’ ಎಂಬ ಬ್ರೇಸ್‌ಲೆಟ್ ಅನ್ನು ಅವರು ಅನೇಕ ಸಂದರ್ಭಗಳಲ್ಲಿ ತೊಟ್ಟಿದ್ದರು. ತೆಳುವೂ, ನಾಜೂಕೂ ಆದ ಇದರ ಬೆಲೆ ಕೇವಲ 11 ಸಾವಿರ ರೂಪಾಯಿ.

ಹೆಣ್ಣುಮಕ್ಕಳಷ್ಟೇ ಅಲ್ಲ, ಪುರುಷ ಸೆಲೆಬ್ರಿಟಿಗಳಿಗೂ ಬ್ರೇಸ್‌ಲೆಟ್‌ಗೂ ಅವಿನಾಭಾವ ಸಂಬಂಧವಿದೆ. ಸಲ್ಮಾನ್ ಖಾನ್ ತೊಡುವ ಫೋರೋಝಾ ಬ್ರೇಸ್‌ಲೆಟ್ ದೊಡ್ಡ ‘ಸ್ಟೈಲ್ ಸ್ಟೇಟ್‌ಮೆಂಟ್’. ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಕೂಡ ಆಗೀಗ ಕ್ಲಾಸಿ ಆಗಿರುವ ಬಂಗಾರದ ಕಡಗ ತೊಡುತ್ತಿರುತ್ತಾರೆ. ಸಫೈರ್ ಉಂಗುರವನ್ನು ಹೆಚ್ಚು ಇಷ್ಟಪಡುವ ಅಮಿತಾಭ್ ಬಚ್ಚನ್ ಕೈಗಳಲ್ಲಿ ಹಲವು ಬಣ್ಣ ಬಣ್ಣಗಳ ಬ್ರೇಸ್‌ಲೆಟ್‌ಗಳು ಇರುತ್ತವೆ. ಟ್ರೆಂಡಿ ಆಗಿರುವ ಪೆಂಡೆಂಟ್ ಹಾಗೂ ಬ್ರೇಸ್‌ಲೆಟ್‌ಗಳನ್ನು ತೊಡುವುದರಲ್ಲಿ ಹೃತಿಕ್ ರೋಷನ್ ಕೂಡ ಹಿಂದೆ ಬಿದ್ದವರಲ್ಲ.

ಬ್ರೇಸ್‌ಲೆಟ್ ಅನ್ನು ಪುರುಷರು ತೊಡಬೇಕೋ ಬೇಡವೋ ಎನ್ನುವ ಕುರಿತೇ ಫ್ಯಾಷನ್ ನಿಯತಕಾಲಿಕವೊಂದರಲ್ಲಿ ಚರ್ಚೆ ಪ್ರಕಟವಾಗಿತ್ತು. ಯಾವ್ಯಾವ ರಾಜ–ಮಹಾರಾಜರು, ಹಳೆಯ ಕಾಲದ ಹಾಲಿವುಡ್ ನಟರು ಅದನ್ನು ಫ್ಯಾಷನ್ ಸಂಕೇತವಾಗಿಸಿಕೊಂಡಿದ್ದರು ಎಂಬ ಉದ್ದದ ಪಟ್ಟಿಯೇ ಅದರಲ್ಲಿ ಪ್ರಕಟವಾಗಿತ್ತು.

ಕೈಗಡಿಯಾರ ಇಲ್ಲದ ಕಾಲದಲ್ಲಿ ಕಡಗ ಪುರುಷರ ಎದ್ದುಕಾಣುವ ಒಡವೆಯಾಗಿತ್ತು. ಕರಡಿ ಕುಣಿಸುವ ಬಾಲರ ಜೀವನ ಕಬ್ಬಿಣದ ಕಡಗವನ್ನು ಸ್ಟೈಲ್ ಸ್ಟೇಟ್‌ಮೆಂಟ್ ಎನ್ನಲು ಸಾಧ್ಯವಿಲ್ಲವಾದರೂ, ಅವನ ಇರುವಿಕೆಯ ದರ್ಶನದ ಸಂಕೇತ ಅದು.

ಕೈಗಡಿಯಾರ ಹಾಗೂ ವಸ್ತ್ರಗಳ ಬಣ್ಣಕ್ಕೆ ಹೊಂದುವಂಥ ಮಣಿಗಳಿಂದ ಮಾಡಿದ, ಚರ್ಮದ, ದಪ್ಪ ದಾರಗಳಿಂದ ಮಾಡಿದ ಬ್ರೇಸ್‌ಲೆಟ್‌ಗಳು ಈಗೀಗ ಫ್ಯಾಷನ್ ಭಾಗವಾಗುತ್ತಿವೆ. ಹಿಂದಿ ನಟ ಟೈಗರ್ ಶ್ರಾಫ್ ಇಂತಹ ಫ್ಯಾಷನ್ ಸ್ಟೇಟ್‌ಮೆಂಟ್ ನೀಡುವ ಬ್ರೇಸ್‌ಲೆಟ್‌ಗಳನ್ನು ತೊಡುತ್ತಾರೆ. ಅವರ ಅಭಿಮಾನಿಗಳಲ್ಲಿ ಚಿಣ್ಣರು, ಚಿನ್ನರು ಹೆಚ್ಚಾಗಿರುವುದರಿಂದ ಅವರೂ ಅದನ್ನು ಅನುಕರಿಸುತ್ತಾರೆ.

ವಿಷ್ಣುವರ್ಧನ್ ಕೈಯಲ್ಲಿನ ಲೋಹದ ಕಡಗದ ಖದರು ನಾಯಕನ ಪ್ರಭಾವಳಿಯ ಭಾಗವಾದರೆ, ಟೈಗರ್ ತರಹದವರ ಕೈಯಲ್ಲಿನ ಬಣ್ಣಬಣ್ಣದ ಬ್ರೇಸ್‌ಲೆಟ್ ಹೊಸಕಾಲದ ಫ್ಯಾಷನ್ ಹಾವಳಿಯ ಬಿಂಬವಷ್ಟೇ. ■

